# ಕರ್ನಾಟಕ ಸರ್ಕಾರ

ಸಂಖ್ಯೆ:ಸಿಹೆಚ್‌ಎಸ್/392/2020 ದಿನಾಂಕ: 21-05-2020

## ಸುತ್ತೋಲೆ

**ವಿಷಯ:** ನಿಯಂತ್ರಣ ವಲಯ, ಕ್ಲಸ್ಟರ್ ಇವುಗಳ ವ್ಯಾಖ್ಯಾಯನ ಮತ್ತು ಪ್ರಮಾಣೀಕೃತ ಕಾರ್ಯನಿರ್ವಹಣಾ ಪ್ರಕ್ರಿಯೆ (ಎಸ್.ಓ.ಪಿ)ಕುರಿತು

**ಉಲ್ಲೇಖ:**
1. ಸುತ್ತೋಲೆ ಸಂಖ್ಯೆ HFW 100 ACS 2020 ದಿನಾಂಕ: 11.04.2020
2. ಸಂಖ್ಯೆ: ಹೆಚ್.ಎಫ್‌ಡಬ್ಲ್ಯೂ 109 ಅಮುಕಾ 2020, ದಿನಾಂಕ 17/04/2020

*****

ನಿಯಂತ್ರಣವಲಯ, ಬಫರ್ ವಲಯಮತ್ತುಕ್ಲಸ್ಟರ್‌ಇವುಗಳ ಬಗ್ಗೆ ವ್ಯಾಖ್ಯಾನಿಸಿ, ಮೇಲಿನ ಉಲ್ಲೇಖಿತ ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ. ಕೋವಿಡ್-೧೯ರ ಉಲ್ಬಣಿಸುತ್ತಿರುವ ಪರಿಸ್ಥಿತಿಯ ಹಿನ್ನೆಲೆಯಲ್ಲಿ (ಪ್ರಕರಣಗಳು ಹೆಚ್ಚಾಗಿರುತ್ತವೆ ಮತ್ತು ಹೊರ ರಾಜ್ಯಗಳಿಂದ ರಾಜ್ಯಕ್ಕೆ ಬರುವವರ ಚಲನ-ವಲನ ಹೆಚ್ಚಾಗಿರುತ್ತದೆ) ತಜ್ಞರ ಸಮಿತಿಯೊಂದಿಗೆ ಕೂಲಂಕುಷವಾಗಿ ಪರಿಶೀಲನೆ ನಡೆಸಲಾಗಿರುತ್ತದೆ. ಆಳವಾಗಿ ಪರಿಶೀಲಿಸಿದ ನಂತರ ಕೋವಿಡ್ ಜಾಗತಿಕ ಪಿಡುಗನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಸಲುವಾಗಿ ನಿಯಂತ್ರಣ ವಲಯ, ಬಫರ್ ವಲಯ ಮುಂತಾದವುಗಳ ವ್ಯಾಖ್ಯಾಯನ ನಿರ್ದೇಶಿತ ಚಟುವಟಿಕೆಗಳ ಪರಿಷ್ಕರಣೆಯ ಅಗತ್ಯತೆಯನ್ನು ಮನಗಣಾಲಾಗಿರುತ್ತದೆ. ಆದುದರಿಂದ ಮೇಲೆ ಉಲ್ಲೇಖಿಸಲಾದ 2 ಸುತ್ತೋಲೆಗಳನ್ನು ರದ್ದುಗೊಳಿಸಿ, ಕೆಳಕಂಡಂತೆ ಪರಿಷ್ಕೃತ ಸುತ್ತೋಲೆಯನ್ನು ಹೊರಡಿಸಲಾಗಿದೆ.

I. **ಪರಿಷ್ಕೃತಸುತ್ತೋಲೆಯು ವ್ಯಾಖ್ಯಾನ** ಮತ್ತು ನಿರ್ವಹಣೆ ಕುರಿತಂತೆ ವಿವರವಾದ ಕಾರ್ಯತಂತ್ರಗಳನ್ನು ಒಳಗೊಂಡಿರುತ್ತದೆ.

### 1. ನಿಯಂತ್ರಿತವಲಯ:

ಈ ವಲಯವು ಕರೋನ ವೈರಾಣು ಸೋಂಕಿತ ವ್ಯಕ್ತಿಯ ವಾಸದ ಮನೆಯ ಸುತ್ತಲೂ ಇರುವ ನಿಖರವಾಗಿ ಗುರುತಿಸಲ್ಪಟ್ಟ ಸರಹದ್ದು ಪ್ರದೇಶವಾಗಿರುತ್ತದೆ. ಈ ಪ್ರದೇಶದಲ್ಲಿ ಸೋಂಕು ಹರಡುವುದನ್ನು ತಡೆಗಟ್ಟಲು ಬಹಳಷ್ಟು ಪರಿಣಾಮಕಾರಿಯಾದ ಹಾಗೂ ಕಟ್ಟುನಿಟ್ಟಿನ ನಿಯಂತ್ರಣ ಕ್ರಮಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಇದು ಎಲ್ಲಿಯವರೆಗೆ ನಿಯಂತ್ರಣ ವಲಯವಾಗಿಯೇ ಮುಂದುವರಿಯುತ್ತದೆ ಎಂದರೆ,

i. ಕೊನೆಯ ಕೋವಿಡ್ ಪ್ರಕರಣದ ನಂತರದ 28 ದಿನಗಳಲ್ಲಿ ಯಾವುದೇ ಹೊಸ ಕೋವಿಡ್ ಪಾಸಿಟಿವ್ ಪ್ರಕರಣ ವರದಿಯಾಗದಿದ್ದರೆ.

ii. ನಿಯಂತ್ರಿತ ವಲಯದಲ್ಲಿ 10 ಅಥವಾ ಅದಕ್ಕಿಂತ ಕಡಿಮೆ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತ ವ್ಯಕ್ತಿಗಳು ಸಕ್ರಿಯ ಗೃಹ ನಿರ್ಬಂದದಲ್ಲಿ ಉಳಿದಿದ್ದರೆ.

iii. "**ಪ್ರದೇಶ**" ಎಂದರೆ ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ:

**ಎ) ವಸತಿಸಮುಚ್ಚಯ (ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್)-** ಕೋವಿಡ್-ಪಾಸಿಟಿವ್ ವ್ಯಕ್ತಿ ವಾಸವಿರುವ ಅಂತಸ್ತು ಹಾಗೂ ಮೇಲಿನ ಒಂದು ಅಂತಸ್ತು ಮತ್ತು ಕೆಳಗಿನ ಒಂದು ಅಂತಸ್ತು.

**ಬಿ) ಪ್ರತ್ಯೇಕ ಮನೆ/ವಿಲ್ಲಾ**: ಕೋವಿಡ್-ಪಾಸಿಟಿವ್ ವ್ಯಕ್ತಿಯ ವಾಸದಮನೆ ಇರುವ ಬೀದಿ. ಒಂದು ಪಕ್ಷ ಉದ್ದದ ರಸ್ತೆಯಿದ್ದರೆ ನಿಯಂತ್ರಣಕ್ಕಾಗಿ ಸೂಕ್ತ ಪರಿಧಿ (ಪೆರಿಮೀಟರ್) ಆಗಿ ವಿಭಜಿಸುವುದು.

**ಸಿ) ಕೊಳಗೇರಿ ಪ್ರದೇಶಕ್ಕೆ:** (ಅಧಿಸೂಚಿತ ಅಥವಾ ಅಲ್ಲದೆಯೂ)- ಕೋವಿಡ್-ಪಾಸಿಟಿವ್ ವ್ಯಕ್ತಿಯ ಮನೆ ಇರುವ ಓಣಿ ಹಾಗೂ ಎರಡು ಬದಿಗಳಲ್ಲಿನ (ಹಿಂದೆ ಮತ್ತು ಮುಂದೆ) ಇರುವ ಓಣಿಗಳು.

**ಡಿ) ಗ್ರಾಮೀಣ ಪ್ರದೇಶಕ್ಕೆ:**ಕೋವಿಡ್-ಪಾಸಿಟಿವ್ ವ್ಯಕ್ತಿ ವಾಸವಿರುವ ಅಥವಾ ಹರಡಿರುವ ಸಣ್ಣ ಪ್ರದೇಶ –ಅಗತ್ಯಕ್ಕೆ ತಕ್ಕಂತೆ ಇಡೀ ವಾಸದ ಪ್ರದೇಶ.

iv. ಮೇಲೆ ವ್ಯಾಖ್ಯಾನ ಮಾಡಿದಂತೆ ಪ್ರದೇಶಗಳನ್ನು ಗುರುತಿಸುವುದಕ್ಕಾಗಿ ರಸ್ತೆ, ಚರಂಡಿ, ಉದ್ಯಾನವನ ಮುಂತಾದ ಗುರುತುಗಳನ್ನು ಭೌಗೋಳಿಕವಾಗಿ ವಿಂಗಡಿಸುವ ಕ್ರಮವನ್ನು ಬಿಬಿಎಂಪಿ ಆಯುಕ್ತರು/ಜಿಲ್ಲೆಯ ಜಿಲ್ಲಾಧಿಕಾರಿಗಳು ಗುರುತಿಸತಕ್ಕದ್ದು.

v. ಹಿಂದಿನ ದಿನಾಂಕ 17/04/2020ರ ಸುತ್ತೋಲೆಯಂತೆ ಅಧಿಸೂಚಿಸಿದ ನಿಯಂತ್ರಿತ ವಲಯಗಳ ಕ್ಷೇತ್ರವನ್ನು ಈ ಸುತ್ತೋಲೆಯಲ್ಲಿ ಮಿತಿಗೊಳಿಸಿರುವುದರಿಂದ ಬಿ.ಬಿ.ಎಂ.ಪಿ ಆಯುಕ್ತರು/ಜಿಲ್ಲೆಯ ಜಿಲ್ಲಾಧಿಕಾರಿಗಳು ಪ್ರಸ್ತುತ ಸುತ್ತೋಲೆಯಂತೆ ನಿಯಂತ್ರಿತ ಪ್ರದೇಶವನ್ನು ಗುರುತಿಸಿ ಪರಿಷ್ಕೃತ ಅಧಿಸೂಚನೆ ಹೊರಡಿಸುವುದು.

**2. ಬಫರ್ ವಲಯ:**

ಬಫರ್ ವಲಯ ಎಂದರೆ, ನಗರ ಪ್ರದೇಶದಲ್ಲಿ ಕೋವಿಡ್-೧೯ ರೋಗಿಯ ವಸತಿ ಸುತ್ತಲೂ ಇರುವ 200 ಮೀಟರ್ ವ್ಯಾಸದ ಪ್ರದೇಶ.

ಗ್ರಾಮೀಣ ಪ್ರದೇಶದಲ್ಲಿ ಕೋವಿಡ್-19 ಸೋಂಕಿತ ವ್ಯಕ್ತಿಯು ವಾಸಿಸುವ ಸಂಪೂರ್ಣ ಗ್ರಾಮ.

ಸೋಂಕನ್ನು ತಡೆಯುವ ಸಲುವಾಗಿ ಸಕ್ರಿಯ ಸರ್ವೇಕ್ಷಣೆ ಹಾಗೂ ವ್ಯಕ್ತಿಗಳ ನಡುವೆ ಭೌತಿಕ ಅಂತರವನ್ನು ಕಾಪಾಡಬೇಕಾಗಿರುತ್ತದೆ. ಸಕ್ರಿಯ ಸಮೀಕ್ಷೆಯನ್ನು ನಿಯಂತ್ರಣ ವಲಯದಲ್ಲಿ ಪ್ರತಿನಿತ್ಯ ಹಾಗೂ ಬಫರ್ ವಲಯದಲ್ಲಿ ವಾರಕ್ಕೆ ಎರಡಾವರ್ತಿ ನಡೆಸತಕ್ಕದ್ದು.

ಕಡೆಯ ಕೋವಿಡ್-೧೯ರ ಸೋಂಕು ವರದಿಯಾದ 28 ದಿನಗಳ ವರೆಗೆ ಯಾವುದೇ ಹೊಸ ಕೋವಿಡ್-೧೯ರ ಪ್ರಕರಣ ವರದಿಯಾಗದಿದ್ದರೆ ಅಥವಾ 10 ಜನರಿಗಿಂತ ಕಡಿಮೆ ಸಂಪರ್ಕಿತರು ಸಕ್ರಿಯ ಗೃಹ ನಿರ್ಬಂಧದಲ್ಲಿದ್ದರೆ (ಈಗಾಗಲೇ ವ್ಯಾಖ್ಯಾನಿಸಿದಂತೆ) ಆಗ ನಿಯಂತ್ರಿತ ವಲಯ ಮತ್ತು ಅದರ ಸುತ್ತಲಿನ ಬಫರ್ ವಲಯ ಸಾಮಾನ್ಯ ವಲಯಕ್ಕೆ ಪರಿವರ್ತಿತವಾಗುತ್ತದೆ.

**3. ಸಮೂಹ (ಕ್ಲಸ್ಟರ್):**

ಒಂದು ಸೀಮಿತ ಭೌಗೋಳಿಕ ಪ್ರದೇಶದಲ್ಲಿ ಸಂಕ್ರಮಣ ಶಾಸ್ತ್ರದ ಅನ್ವಯಪರಸ್ಪರ ಸಂಬಂಧಿತವಾಗಿರುವ ಕೋವಿಡ್-೧೯ ಪಾಸಿಟಿವ್ ಪ್ರಕರಣಗಳು ಕಂಡುಬಂದಿದ್ದರೆ ಅಂತಹ ಪ್ರದೇಶ ಕ್ಲಸ್ಟರ್ ಎಂದು ಕರೆಯಲಾಗುತ್ತದೆ. ವರದಿಯಾದ ಪ್ರಕರಣಗಳು ಯಾವುದೇ ಒಂದು ಕೋವಿಡ್-೧೯ ಸೋಂಕಿನ ಮೂಲಕ್ಕೆ ಸಂಬಂಧಪಟ್ಟಿರಬೇಕು. ಅಂತಹ ಪ್ರಕರಣಗಳು ಈಗಾಗಲೇ ತಿಳಿಸಿದಂತೆ ಸೀಮಿತ ಪ್ರದೇಶ ಅಥವಾ ಸಣ್ಣ ಭೌಗೋಳಿಕ ಪ್ರದೇಶದಲ್ಲಿರಬೇಕು.

## II. ಬಿಬಿಎಂಪಿ ಮತ್ತು ನಗರ ಪ್ರದೇಶಗಳಲ್ಲಿ ಪ್ರಮಾಣಿಕೃತ ನಿರ್ವಹಣಾ ವಿಧಾನ

### 1. ಘಟನಾ ನಿಯಂತ್ರಕ- ಬಿಕ್ಕಟ್ಟು ನಿರ್ವಹಣಾ ತಂಡ

ಒಮ್ಮೆ ಬಿಬಿಎಂಪಿ ಒಂದು ಪ್ರದೇಶವನ್ನು ನಿಯಂತ್ರಿತ ವಲಯ ಎಂದು ಘೋಷಣೆ ಮಾಡಿದ ಬಳಿಕ, ಪ್ರತಿಯೊಂದು ನಿಯಂತ್ರಿತ ವಲಯಕ್ಕೆ ಒಬ್ಬ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಅಥವಾ ಒಂದನೇ ದರ್ಜೆಯ ಅಧಿಕಾರಿಗೆ ಮೆಜಿಸ್ಟೀರಿಯಲ್ ಅಧಿಕಾರಗಳನ್ನು ನೀಡಿ ಅವರನ್ನುಘಟನಾ ನಿಯಂತ್ರಕ ಅಧಿಕಾರಿ (ಕಮಾಂಡರ್) ಯನ್ನಾಗಿ ಆಯುಕ್ತರು ನೇಮಕ ಮಾಡಬೇಕು. ಈ ಕಮಾಂಡರ್ ಬಫರ್ ವಲಯದ ಒಟ್ಟಾರೆ ನಿರ್ವಹಣೆಗೆ ಪೂರ್ಣ ಜವಾಬ್ದಾರನಾಗಿರುತ್ತಾರೆ.ಬಿಬಿಎಂಪಿ ಪ್ರದೇಶಗಳನ್ನು ಹೊರತುಪಡಿಸಿದ ಪ್ರಕರಣಗಳಲ್ಲಿ ಪ್ರತಿ ನಿಯಂತ್ರಿತ ವಲಯ ಮತ್ತು ಬಫರ್ ವಲಯಕ್ಕೆ ಜಿಲ್ಲಾಧಿಕಾರಿಯು ಘಟನಾ ನಿಯಂತ್ರಕನನ್ನು ಮೇಲಿನ ಕ್ರಮದಂತೆ ನೇಮಕ ಮಾಡಬೇಕಾಗುತ್ತದೆ. ನಿಯಂತ್ರಣ ವಲಯಕ್ಕೆ ವಿನ್ಯಾಸಗೊಳಿಸಲಾದ ಎಸ್.ಒ.ಪಿ ಕ್ಲಸ್ಟರ್ ನಲ್ಲಿಯೂ ಜಾರಿಯಲ್ಲಿರುತ್ತದೆ.

ಬಿಬಿಎಂಪಿ ಪ್ರದೇಶದಲ್ಲಿ ಘಟನಾ ಕಮಾಂಡರ್ ಬಿಬಿಎಂಪಿಯ ಹಿರಿಯ ಅಥವಾ ಕಿರಿಯ ಪ್ರಥಮ ದರ್ಜೆ ಅಧಿಕಾರಿಯಾಗಿರಬೇಕು. ಆತನನ್ನು ಈ ಉದ್ದೇಶಕ್ಕಾಗಿ ಮೆಜೆಸ್ಟೀರಿಯಲ್ ಅಧಿಕಾರವನ್ನು ನೀಡಿ ವಿಶೇಷವಾಗಿ ನೇಮಕ ಮಾಡಿರಬೇಕು. ಬಿಬಿಎಂಪಿಯೇತರ ಪ್ರದೇಶಗಳಲ್ಲಿ ಜಿಲ್ಲಾಧಿಕಾರಿಯು ಒಂದು ಅಥವಾ ಅದಕ್ಕಿಂತ ಹೆಚ್ಚಿನ ನಿಯಂತ್ರಿತ ವಲಯಕ್ಕೆ ತಾಲೂಕು/ಜಿಲ್ಲಾ ಮಟ್ಟದ ಅಧಿಕಾರಿಯನ್ನು ಘಟನಾ ಕಮಾಂಡರ್ (ನಿಯಂತ್ರಕ) ಆಗಿ ನೇಮಕ ಮಾಡಬಹುದು.

ನಿಯಂತ್ರಿತ ವಲಯದ ನಿರ್ವಹಣೆಗೆ ಸಂಬಂಧಿಸಿದಂತೆ ಬಿಬಿಎಂಪಿ ಆಯುಕ್ತ/ ಆಯಾ ಜಿಲ್ಲಾಧಿಕಾರಿ ಮಾರ್ಗದರ್ಶನದಲ್ಲಿ ಗಡಿಗಳ ನಿಗದಿಯೂ ಸೇರಿದಂತೆ ಎಲ್ಲಾ ತೀರ್ಮಾನಗಳನ್ನು ಕೈಗೊಳ್ಳುವ ಜವಾಬ್ದಾರಿ ಘಟನಾ ಕಮಾಂಡರ್ ಅವರದಾಗಿರುತ್ತದೆ. ನಿರ್ದಿಷ್ಟವಾದ ವ್ಯಾಪ್ತಿಯನ್ನು ಗುರುತಿಸುವ ಜವಾಬ್ದಾರಿಯನ್ನು ಒಳಗೊಂಡಿರುತ್ತದೆ. ಸರ್ಕಾರದ ನಿರ್ದೇಶನಗಳಿಗೆ ಅನುಗುಣವಾಗಿ ದಿನನಿತ್ಯದ ನಿರ್ವಹಣೆ ಘಟನಾ ಕಮಾಂಡರ್ ಹೊಣೆಗಾರಿಕೆಯಾಗಿರುತ್ತದೆ. ನಿಯಂತ್ರಿತ ವಲಯದ ಗಡಿಗಳನ್ನು ಸ್ಪಷ್ಟವಾಗಿ ಗುರುತಿಸಿರಬೇಕು ಹಾಗೂ ಪ್ರವೇಶ ಮತ್ತು ನಿರ್ಗಮನ ಪಾಯಿಂಟ್ ಗಳನ್ನು ಗುರುತಿಸಬೇಕು.

ನಿಯಂತ್ರಿತ ವಲಯದ ಕಣ್ಣಳತೆ ದೂರದಲ್ಲಿ ಘಟನಾ ಕಮಾಂಡ್ ಕೇಂದ್ರವನ್ನು ಸ್ಥಾಪಿಸಿ ಘಟನಾ ಕಮಾಂಡರ್ ಅಲ್ಲಿಂದಲೇ ಕಾರ್ಯನಿರ್ವಹಿಸಬೇಕು. ಘಟನಾ ಕಮಾಂಡರ್ ಕೇಂದ್ರೀಕೃತ ನಿಯಂತ್ರಣ ಕೊಠಡಿಯನ್ನು ಹೊಂದಿದ್ದು ಆ ನಿಯಂತ್ರಣ ಕೊಠಡಿ, ನಿಯೋಜಿಸಲ್ಪಟ್ಟಿರುವ ಪೊಲೀಸ್, ನಗರಸಭೆ ಮತ್ತು ಆರೋಗ್ಯ ಇಲಾಖೆ ಪ್ರತಿನಿಧಿಗಳ ನೆರವಿನೊಂದಿಗೆ ಘಟನಾ ಕಮಾಂಡರ್ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತದೆ. ಅದು ದಿನದ 24 ತಾಸು ಕಾರ್ಯನಿರತವಾಗಿದ್ದು ಅದರಲ್ಲಿರುವ ಸಿಬ್ಬಂದಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಿರುತ್ತದೆ. ಈ ಕಮಾಂಡ್ ಕೇಂದ್ರದ ಸುಗಮ ಕಾರ್ಯನಿರ್ವಹಣೆಗೆ ಅಗತ್ಯವಾದ ಎಲ್ಲ ಸೌಕರ್ಯಗಳನ್ನು ಬಿಬಿಎಂಪಿ/ನಗರಸಭೆ ಒದಗಿಸಬೇಕು.

ನಿಯಂತ್ರಿತ ವಲಯದಲ್ಲಿ ನಿಯಂತ್ರಣ ನಿಯಮ ಅನುಷ್ಠಾನಗೊಳಿಸಲು ವಿಶೇಷ ತಂಡಗಳನ್ನು ರಚಿಸಬೇಕು. ಘಟನಾ ಕಮಾಂಡರ್ ನಿಯಂತ್ರಿತ ವಲಯದಲ್ಲಿ ಲಾಕ್-ಡೌನ್ ಜಾರಿಗೊಳಿಸಲು ಸಂಚಾರಿ ತಂಡಗಳನ್ನು ನಿಯೋಜಿಸಬೇಕು. ನಿಯಂತ್ರಿತ ವಲಯದಲ್ಲಿ ವಾಸಿಸುವ ಜನರ ವಿಶೇಷ ಅವಶ್ಯಕತೆಗಳನ್ನು (ಗರ್ಭಿಣಿಯರು, ಹೃದ್ರೋಗಿಗಳು, ಇತ್ಯಾದಿ) ಅಂದಾಜು ಮಾಡಿ ಅಂತಹವರಿಗೆ ತುರ್ತು ಸಂದರ್ಭಗಳಲ್ಲಿ ನೆರವು ಒದಗಿಸಲು ಸ್ಥಳೀಯ ಸಂಘಗಳ ಸಹಕಾರದೊಂದಿಗೆ ಸೂಕ್ತ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಆಯಾ ಬಿಬಿಎಂಪಿ ವಲಯದ ಜಂಟಿ ಆಯುಕ್ತರು/ ನಗರಸಭೆಯ ಚೀಫ್ ಆಫೀಸರ್ ಘಟನಾ

ಕಮಾಂಡರ್ ಗೆ ಅವನ/ಅವಳ ಕರ್ತವ್ಯಗಳನ್ನು ಸಮರ್ಪಕವಾಗಿ ನಿಭಾಯಿಸಲು ಸಕಲ ನೆರವು ನೀಡಬೇಕು ಹಾಗೂ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಬೇಕು.

## 2. ಸಂಪೂರ್ಣ ಸೀಲ್ ಡೌನ್- ಪೊಲೀಸರ ಪಾತ್ರ

ನಿಯಂತ್ರಿತ ವಲಯದ ಎಲ್ಲಾ ಪ್ರವೇಶ ದ್ವಾರಗಳಲ್ಲೂ ಭದ್ರವಾದ ತಡೆಗೋಡೆ ಹಾಕುವ ಮೂಲಕ ಪೊಲೀಸರು ನಾಕಾಬಂದಿ ಮಾಡಬೇಕು.ನಿಯಂತ್ರಿತ ಪ್ರದೇಶದಲ್ಲಿರುವ ಯಾವುದೇ ವ್ಯಕ್ತಿ ಯಾವುದೇ ಕಾರಣಗಳಿಗಾಗಿ ಮನೆಗಳಿಂದ ಹೊರಗೆ ಬರಲು ಅವಕಾಶ ನೀಡಲಾಗುವುದಿಲ್ಲ. ಪ್ರತಿಯೊಂದು ನಿಯಂತ್ರಿತ ವಲಯಕ್ಕೆ ಒಂದೇ ಒಂದು ಪ್ರವೇಶ ಮತ್ತು ನಿರ್ಗಮನ ದ್ವಾರವಿರಬೇಕು. ನಿಯಂತ್ರಿತ ವಲಯದ ಒಳಗೆ ಮತ್ತು ಹೊರಗೆ ಯಾವುದೇ ಖಾಸಗಿ ವಾಹನ ಸಂಚಾರಕ್ಕೆ ಅವಕಾಶ ನೀಡಬಾರದು. ಇಡೀ ಪ್ರದೇಶ ಸಂಪೂರ್ಣವಾಗಿ ಸೀಲ್ ಆಗಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಪೊಲೀಸ್ ಸಿಬ್ಬಂದಿಯದ್ದಾಗಿರುತ್ತದೆ.

ಮುಂದುವರಿದು, ಕರ್ಫ್ಯೂ ನಿರ್ವಹಣೆಯ ಹೊಣೆಗಾರಿಕೆಯನ್ನೂ ಪೊಲೀಸರು ನಿರ್ವಹಿಸಬೇಕು. ಅಗತ್ಯ ಸೇವೆಗಳು ಮತ್ತು ವೈದ್ಯಕೀಯ ತುರ್ತು ಸಂದರ್ಭಗಳಿಗೆ ಪೊಲೀಸರು ಎಮರ್ಜೆನ್ಸಿ ಪಾಸ್ ಗಳನ್ನು ವಿತರಿಸುವ ಮೂಲಕ ಅವಕಾಶ ನೀಡಬೇಕು. ಸೀಲ್ ಡೌನ್ ಜಾರಿಗೆ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು. ನಿಯಂತ್ರಿತ ವಲಯದಲ್ಲಿ ಸಂಪೂರ್ಣ ಲಾಕ್ ಡೌನ್ ಖಾತರಿಪಡಿಸಲು ಡ್ರೋನ್.ಗಳನ್ನು ಪರಿಣಾಮಕಾರಿಯಾಗಿ ಬಳಸಬೇಕು.

## 3. ಆರೋಗ್ಯ ಇಲಾಖೆ ಜವಾಬ್ದಾರಿಗಳು

ರಾಜ್ಯ ಆರೋಗ್ಯ ಇಲಾಖೆ ಮತ್ತು ನಗರಾಡಳಿತ ಆರೋಗ್ಯಾಧಿಕಾರಿಗಳು ಜಂಟಿಯಾಗಿ ಮೇಲ್ವಿಚಾರಣೆ ಮತ್ತು ಪ್ರತಿಬಂಧಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಅಂತಹ ವಲಯದಲ್ಲಿ ಆರೋಗ್ಯ ಔಟ್-ಪೋಸ್ಟ್ ಆರಂಭಿಸಿ ತಪಾಸಣೆಗೆ ಓರ್ವ ವೈದ್ಯರ ನೇತೃತ್ವದಲ್ಲಿ ಕ್ಷೇತ್ರ ಸಿಬ್ಬಂದಿಯನ್ನು ಪ್ರತಿನಿತ್ಯದ ಆರೋಗ್ಯ ತಪಾಸಣೆ ಮತ್ತು ಐಇಸಿ ಪ್ರಚಾರಕ್ಕೆ ಅವಶ್ಯವಾಗಿನಿಯೋಜಿಸಬೇಕು.

ಶಿಷ್ಟಾಚಾರದಂತೆ ಸೋಂಕು ಸಂಪರ್ಕಿತರ ಅನುಸರಣೆಯ ಕಾರ್ಯವನ್ನು ಕೈಗೊಳ್ಳಬೇಕು. ಕೋವಿಡ್ ಪಾಸಿಟಿವ್ ಸಂಪರ್ಕ ವ್ಯಕ್ತಿಗಳಿಗೆ ತಕ್ಷಣವೆ ಸ್ಟಾಂಪಿಂಗ್ ಮಾಡಬೇಕು ಮತ್ತು ಮನೆಯ ಮುಂಭಾಗ ನೋಟಿಸ್ ಅಂಟಿಸಿ ಸಂಬಂಧಿಸಿದ ಮಾಹಿತಿಯನ್ನು ಅಂತರ್ಜಾಲದಲ್ಲಿ ಪ್ರಚುರಪಡಿಸಬೇಕು. ಗೃಹ ನಿರ್ಬಂಧವನ್ನು ಅರ್ಥಪೂರ್ಣವಾಗಿ ನಿರ್ವಹಿಸುವ ಜವಾಬ್ದಾರಿ ಘಟನಾ ಕಮಾಂಡರ್ ಅಧಿಕಾರಿಯದ್ದಾಗಿರುತ್ತದೆ.

ಕೊಳಗೇರಿ ಪ್ರದೇಶಗಳಲ್ಲಿ ಸ್ವಾಭಾವದ ಕಾರಣ ಗೃಹ ನಿರ್ಬಂಧವನ್ನು ಪರಿಣಾಮಕಾರಿಯಾಗಿ ಪಾಲಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಂಪರ್ಕಿತ ವ್ಯಕ್ತಿಗಳನ್ನು ಕೊಳಗೇರಿಗಳಿಂದ ಸಾಂಸ್ಥಿಕ ಕ್ವಾರಂಟೈನ್ ಕೇಂದ್ರಗಳಿಗೆ ಸ್ಥಳಾಂತರಿಸಬೇಕು. ಅಲ್ಲಿನ ಸಂಪರ್ಕಿತರ ಗಂಟಲು ಮತ್ತು ಮೂಗಿನ ಮಾದರಿಗಳನ್ನು ಸಂಗ್ರಹಿಸುವ ಕಾರ್ಯ ಆರೋಗ್ಯ ತಂಡದ್ದಾಗಿರುತ್ತದೆ.

ಪೂರ್ಣ ಸಮುದಾಯದ ಆರೋಗ್ಯ ಸಮೀಕ್ಷೆಯನ್ನು ಕೈಗೊಂಡುಕೋವಿಡ್-೧೯ ಅನ್ನು ಹೋಲುವ ಇನ್-ಫ್ಲೂಯೆನ್ಸಾದಂತಹ ಸೋಂಕು ಮತ್ತು ತೀವ್ರ ಶ್ವಾಸಕೋಶದ ಸೋಂಕಿನ (SARI)ರೋಗ ಲಕ್ಷಣವಿರುವ ವ್ಯಕ್ತಿಗಳ ಶೀಘ್ರ ಪತ್ತೆ ಹಚ್ಚಿ, ಅಂತಹವರಿಗೆ ಆದ್ಯತೆಯ ಮೇರೆಗೆ ಚಿಕಿತ್ಸೆ ಒದಗಿಸಲು ಕೈಗೊಳ್ಳಬೇಕು. ಅಂತಹ ಪ್ರದೇಶದಲ್ಲಿ ಅತ್ಯಂತ ಕಟ್ಟುನಿಟ್ಟಿನ ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಘಟನಾ ಕಮಾಂಡರ್ ಮಾರ್ಗದರ್ಶನದಲ್ಲಿ ಈ ತಂಡ ಸಮುದಾಯಕ್ಕೆ ಸಲಹೆಗಳನ್ನು ನೀಡುತ್ತಿರಬೇಕು. ಆರೋಗ್ಯ ಇಲಾಖೆಯುಮಾಸ್ಕ್ ಗಳು

ಹಾಗೂ ಇತರೆ ಸಾಮಗ್ರಿಗಳನ್ನು ಒದಗಿಸುವಮೂಲಕ ಗೃಹ ನಿರ್ಬಂಧನೆ ಮತ್ತು ಸಾಮಾಜಿಕ ಅಂತರ ಕ್ರಮಗಳ ಪಾಲನೆಗೆ ನೆರವಾಗಬೇಕು.

ಆರೋಗ್ಯ ಸಂಬಂಧಿ ಚಟುವಟಕೆಗಳನ್ನು ಘಟನಾ ನಿಯಂತ್ರಕನ ಒಟ್ಟಾರೆ ಮೇಲ್ವಿಚಾರಣೆಯಲ್ಲಿ ಕೈಗೊಳ್ಳಬೇಕು.

**4. ನಗರಸಭೆ ಅಧಿಕಾರಿಗಳ ಜವಾಬ್ದಾರಿ;**

ನಿಯಂತ್ರಿತ ವಲಯದಲ್ಲಿ ಒಟ್ಟಾರೆಯಾಗಿ ನೈರ್ಮಲೀಕರಣದ ನಿರ್ವಹಣೆ ಮಾಡುವುದು ಬಿಬಿಎಂಪಿ/ನಗರಸಭೆ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ನಿಯಂತ್ರಿತ ವಲಯದಲ್ಲಿ ಪ್ರತಿದಿನವೂ ಘನತ್ಯಾಜ್ಯ ನಿರ್ವಹಣೆ (ಬಯೋ ಮೆಡಿಕಲ್ ತ್ಯಾಜ್ಯ ಸೇರಿದಂತೆ) ಮತ್ತು ಸೋಂಕು ನಿವಾರಣೆ ಸ್ಪ್ರೇ ಮಾಡುವ ಕೆಲಸವನ್ನು ನಿರ್ವಹಿಸತಕ್ಕದ್ದು. ಕುಡಿಯುವ ನೀರಿನ ಕೊರತೆ ಕಂಡುಬಂದರೆ ಅದನ್ನು ಸರಿದೂಗಿಸಲು ಕ್ರಮ ಕೈಗೊಳ್ಳಬೇಕು. ಅಗತ್ಯವೆನಿಸಿದರೆ ಪ್ರತಿ ಮನೆಗಳಿಗೆ ನೀರನ್ನು ಸರಬರಾಜು, ವೈದ್ಯಕೀಯ ಮತ್ತಿತರ ಅಗತ್ಯ ಸೇವೆಗಳನ್ನು ಪೂರೈಸತಕ್ಕದ್ದು. ಅಗತ್ಯಕ್ಕೆ ತಕ್ಕಂತೆ ಬಿಬಿಎಂಪಿ/ನಗರಸಭೆ ಅಧಿಕಾರಿಗಳು ಆಹಾರ ಪೊಟ್ಟಣಗಳು ಮತ್ತು ಪಡಿತರವನ್ನು ಒದಗಿಸಬೇಕು. ಈ ಮೇಲೆ ಪ್ರಸ್ತಾಪ ಮಾಡಿದ ಕೆಲಸಗಳನ್ನು ನಿರ್ವಹಿಸಲು ನಿಯಂತ್ರಣ ವಲಯಗಳಲ್ಲಿ ಸರ್ಕಾರಿ ಗುರುತಿನ ಪತ್ರಗಳನ್ನು ಹೊಂದಿದ ಎಲ್ಲ ನಗರಸಭೆ ಸಿಬ್ಬಂದಿಗೆ ಅನುಮತಿ ನೀಡಬೇಕು.

**5. ಅಗತ್ಯವಸ್ತು ಪೂರೈಕೆ ನಿರ್ವಹಣೆ**

ನಿಯಂತ್ರಿತ ವಲಯವನ್ನು ಸಂಪೂರ್ಣ ಸೀಲ್ ಡೌನ್ ಮಾಡುವುದರಿಂದ, ಈ ಪ್ರದೇಶಗಳ ವ್ಯಾಪ್ತಿಯ ಜನ ಮನೆಗಳಿಂದ ಯಾವ ಕಾರಣಕ್ಕೂ ಹೊರಗೆ ಬರುವಂತಿಲ್ಲ. ಹಾಗಾಗಿ ಜನರಿಗೆ ಮೂಲಭೂತ ಅಗತ್ಯಗಳಾದ ದಿನಸಿ ಪದಾರ್ಥಗಳು, ಮಾಂಸ, ಹಾಲು, ಎಲ್ ಪಿಜಿ ಅನಿಲ ಮತ್ತು ಔಷಧಗಳನ್ನು ಪೂರೈಸುವವರಿಗೆ ಕೂಡ ಪೊಲೀಸರು ಪ್ರವೇಶ ಮತ್ತು ನಿರ್ಗಮನ ಪಾಸ್ ಗಳನ್ನು ಕೊಡಬೇಕಾಗುತ್ತದೆ. ಆಯಾ ವ್ಯಾಪ್ತಿಯ ಸ್ಥಳೀಯ ಪೊಲೀಸ್ ಠಾಣೆಗಳು ಈ ಸಂಬಂಧ ತುರ್ತು ಪಾಸ್ ಗಳನ್ನು ಕೊಡಬೇಕು. ಹೀಗೆ ಮಾಡುವ ಮೂಲಕ, ಅತ್ಯಗತ್ಯ ವಸ್ತುಗಳು ಮತ್ತು ಸೇವೆಗಳ ಲಭ್ಯತೆಗೆ ಆ ವ್ಯಾಪ್ತಿಯಲ್ಲಿ ತೊಂದರೆಯಾಗದಂತೆ ನಿಗಾ ವಹಿಸಬೇಕು. ನಿಯಂತ್ರಿತ ವಲಯಗಳ ದಿನಸಿ ಅಂಗಡಿಗಳು, ಮಾಂಸ, ಹಾಲು, ಔಷಧಗಳು, ಎಲ್.ಪಿ.ಜಿ ಅಂಗಡಿಗಳು ಕೂಡ ಮುಚ್ಚಿರುತ್ತವೆ. ಇಂತಹ ಪ್ರದೇಶದಲ್ಲಿರುವ ಪಡಿತರ ಚೀಟಿ ಹೊಂದಿರುವವರಿಗೆ ನ್ಯಾಯಬೆಲೆ ಅಂಗಡಿಗಳು ಪಡಿತರವನ್ನು ಮನೆ ಬಾಗಿಲಿಗೆ ತಲುಪಿಸಲು ಕ್ರಮ ಕೈಗೊಳ್ಳಬೇಕು.

**III. ಗ್ರಾಮೀಣ ಪ್ರದೇಶಗಳಲ್ಲಿ ಪ್ರಮಾಣೀಕೃತಕಾರ್ಯನಿರ್ವಹಣಾ ಪ್ರಕ್ರಿಯೆ**

**1. ಘಟನಾ ನಿಯಂತ್ರಕರು- ಬಿಕ್ಕಟ್ಟು ನಿರ್ವಹಣಾ ತಂಡ**

ಜಿಲ್ಲಾಧಿಕಾರಿಯವರು ಯಾವುದೇ ಪ್ರದೇಶವನ್ನು ನಿಯಂತ್ರಣ ವಲಯ ಎಂದು ಘೋಷಣೆ ಮಾಡಿದ ತಕ್ಷಣ, ಅಂತಹ ಪ್ರತಿ ನಿಯಂತ್ರಣ ವಲಯಕ್ಕೆ ಒಬ್ಬ ಕಾರ್ಯನಿರ್ವಾಹಕ ದಂಡಾಧಿಕಾರಿಯನ್ನು ಘಟನಾ ನಿಯಂತ್ರಕರಾಗಿ ನೇಮಕ ಮಾಡುತ್ತಾರೆ. ನಿಯಂತ್ರಣವಲಯದ ಹಾಗೂ ಅದನ್ನು ಸುತ್ತುವರಿದ ಮೀಸಲು ಪ್ರದೇಶದ ನಿರ್ವಹಣೆ ಮಾಡುವುದು ಇದರ ಉದ್ದೇಶವಾಗಿರುತ್ತದೆ. ನಿಯಂತ್ರಣ ವಲಯದ ಸರಹದ್ದನ್ನು ಸ್ಪಷ್ಟವಾಗಿ ಗುರುತಿಸಬೇಕು. ನಿಯಂತ್ರಣ ವಲಯದ ಪ್ರದೇಶದೊಳಕ್ಕೆ ಪ್ರವೇಶ ಕಲ್ಪಿಸುವ ಹಾಗೂ ಅಲ್ಲಿಂದ ಹೊರಹೋಗಲು ಇರುವ ಪ್ರಮುಖ ಸ್ಥಳಗಳನ್ನು ಗುರುತಿಸಬೇಕಾಗುತ್ತದೆ. ಒಂದೊಮ್ಮೆ ಗ್ರಾಮವು ನಿಯಂತ್ರಣ ವಲಯವಾಗಿದ್ದರೆ, ಇಡೀ ನಿವಾಸದ ವ್ಯಾಪ್ತಿಯನ್ನು ಅಥವಾ ಸೂಕ್ತವೆನ್ನಿಸುವ ಪ್ರದೇಶವನ್ನು ಬಿಗಿ ವ್ಯವಸ್ಥೆಯೊಂದಿಗೆ ಸುತ್ತುವರಿಯಬೇಕಾಗುತ್ತದೆ.

ನಿಯಂತ್ರಣವಲಯದ ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳು ಘಟನಾ ನಿಯಂತ್ರಕರ ಜವಾಬ್ದಾರಿಯಾಗಿರುತ್ತದೆ. ಆಯಾ ಜಿಲ್ಲಾಧಿಕಾರಿಯವರ ಮಾರ್ಗದರ್ಶನದಲ್ಲಿ ನಿಯಂತ್ರಣ ವಲಯದ ಸರಹದ್ದು ನಿರ್ಧರಿಸುವ ಹೊಣೆಗಾರಿಕೆ ಕೂಡ ಇವರದ್ದೇ ಆಗಿರುತ್ತದೆ. ಜಿಲ್ಲಾಧಿಕಾರಿಯವರ ನಿರ್ದೇಶನಕ್ಕೆ ಒಳಪಟ್ಟಂತೆ, ಇಂತಹ ಪ್ರದೇಶದ ದಿನವಹಿ ನಿರ್ವಹಣೆ ಕೂಡ ಘಟನಾ ನಿಯಂತ್ರಕನ ಅವರ ಅಧಿಕಾರಕ್ಕೆ ಒಳಪಟ್ಟಿರುತ್ತದೆ. ಮೊದಲೇ ಹೇಳಿದಂತೆ, ನಿಯಂತ್ರಣ ವಲಯದ ಗಡಿಯನ್ನು ಸ್ಪಷ್ಟವಾಗಿ ಗುರುತಿಸಬೇಕಾಗುತ್ತದೆ. ಜೊತೆಗೆ, ನಿಯಂತ್ರಣ ವಲಯಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಗಳು ಹಾಗೂ ಅಲ್ಲಿಂದ ಹೊರ ಊರುಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಗುರುತಿಸುವುದು ಅಗತ್ಯವಾಗಿರುತ್ತದೆ.

ನಿಯಂತ್ರಣ ವಲಯ ಎಂದು ಘೋಷಿತವಾದ ಪ್ರದೇಶಕ್ಕೆ ಹತ್ತಿರದ ಸ್ಥಳದಲ್ಲಿ ಘಟನಾ ನಿಯಂತ್ರಣ ಕೇಂದ್ರವನ್ನು ಸ್ಥಾಪಿಸಬೇಕಾಗುತ್ತದೆ. ಘಟನಾ ನಿಯಂತ್ರಕರಾಗಿ ನೇಮಕಗೊಂಡವರು ಈ ಕೇಂದ್ರಗಳಿಂದ ಕಾರ್ಯನಿರ್ವಹಿಸಲಿದ್ದಾರೆ. ಈ ಕೇಂದ್ರವು ಒಂದು ಕೇಂದ್ರೀಕೃತ ನಿಯಂತ್ರಣ ಕೊಠಡಿಯನ್ನು ಹೊಂದಿರುತ್ತದೆ. ಘಟನಾ ನಿಯಂತ್ರಕರೇ ಇದರ ಮೇಲ್ವಿಚಾರಕರಾಗಿರುತ್ತಾರೆ. ಪೊಲೀಸ್, ಪಂಚಾಯತಿ ಮತ್ತು ಆರೋಗ್ಯ ಇಲಾಖೆ ಪ್ರತಿನಿಧಿಗಳನ್ನು ಇಲ್ಲಿಗೆ ನಿಯೋಜಿಸಲಾಗುತ್ತದೆ. ಘಟನಾ ನಿಯಂತ್ರಕರಿಗೆ ಈ ಆದೇಶದ ಪ್ರಕಾರ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಸ್ಥಳೀಯ ಪಂಚಾಯತಿ ಅಧಿಕಾರಿಗಳು ಎಲ್ಲಾ ರೀತಿಯ ಸಹಕಾರವನ್ನು ನೀಡಬೇಕು.

## 2. ಸಂಪೂರ್ಣ ಸೀಲ್ ಡೌನ್- ಪೊಲೀಸರ ಪಾತ್ರ

ಜನವಸತಿ ಪ್ರದೇಶವನ್ನು ನಿಯಂತ್ರಣ ವಲಯ ಎಂದು ಘೋಷಿಸಿದರೆ ಆ ಪ್ರದೇಶದ ಯಾವುದೇ ವ್ಯಕ್ತಿ ಯಾವುದೇ ಕಾರಣಕ್ಕೂ ಹೊರಗೆ ಬರುವಂತಿಲ್ಲ. ಇಡೀ ಜನವಸತಿ ಪ್ರದೇಶದ ಎಲ್ಲಾ ಪ್ರವೇಶ ಸ್ಥಳಗಳನ್ನು ಪೊಲೀಸರು ಭದ್ರ ತಡೆಗಳಿಂದ ಬಿಗಿಗೊಳಿಸಬೇಕಾಗುತ್ತದೆ. ಅಂತಹ ಇಡೀ ಜನವಸತಿ ಪ್ರದೇಶಕ್ಕೆ ಕೇವಲ ಒಂದೇ ಒಂದು ಪ್ರವೇಶ ಸ್ಥಳವನ್ನು ಮತ್ತು ಹೊರ ಹೋಗುವ ಸ್ಥಳವನ್ನು ನಿಗದಿಗೊಳಿಸಲಾಗುತ್ತದೆ.ಅಂತಹ ನಿಯಂತ್ರಣವಲಯದ ಒಳಕ್ಕೆ ಅಥವಾ ಅಲ್ಲಿಂದ ಹೊರಹೋಗಲು ಯಾವುದೇ ಖಾಸಗಿ ವಾಹನ ಸಂಚಾರಕ್ಕೆ ಅವಕಾಶ ಇರುವುದಿಲ್ಲ. ಅಂತಹ ಪ್ರದೇಶವು ಸಂಪೂರ್ಣ ಸೀಲ್ ಡೌನ್ ಆಗುವಂತೆ ಮಾಡುವುದು ಪೊಲೀಸರ ಹೊಣೆಗಾರಿಕೆ ಆಗಿರುತ್ತದೆ.

## 3. ಆರೋಗ್ಯ ಇಲಾಖೆ- ಜವಾಬ್ದಾರಿಗಳು

ನಿಯಂತ್ರಣ ವಲಯದಲ್ಲಿ ವಿಚಕ್ಷಣೆ ಮತ್ತು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಜಿಲ್ಲಾ ಆರೋಗ್ಯ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಅಂತಹ ವಲಯದಲ್ಲಿ ಒಂದು ಆರೋಗ್ಯ ಹೊರಠಾಣೆ ಸ್ಥಾಪಿಸಬೇಕಾಗುತ್ತದೆ. ಈ ಹೊರಠಾಣೆಯಲ್ಲಿ ಒಬ್ಬ ವೈದ್ಯರು ಮತ್ತು ಸಾಕಷ್ಟು ಕ್ಷೇತ್ರ ಸಿಬ್ಬಂದಿ ಇರಬೇಕು. ಪ್ರತಿದಿನ ಕಟ್ಟುನಿಟ್ಟಾಗಿ ಆರೋಗ್ಯ ಶಿಕ್ಷಣ ಪ್ರಚಾರದ ಜೊತೆಗೆ ದಿನಕ್ಕೆ ಒಂದು ಸಲ ಸೋಂಕು ಸಂಪರ್ಕಿತರ ತಪಾಸಣೆ ಮಾಡುವ ಕಾರ್ಯವನ್ನು ಈ ಸಿಬ್ಬಂದಿ ನಿರ್ವಹಿಸಬೇಕು.

ಶಿಷ್ಟಾಚಾರದ ಪ್ರಕಾರ ಸಂಪರ್ಕಿತರನ್ನು ಪತ್ತೆ ಮಾಡುವ ಕಾರ್ಯ ಕೈಗೆತ್ತಿಕೊಳ್ಳುವ ಅಗತ್ಯವಿದೆ. ತುರ್ತಾಗಿ ಸಂಪರ್ಕಿಗಳಿಗೆ ಮುದ್ರೆ ಒತ್ತುವುದು, ನೋಟಿಸ್ ಅನ್ನು ಅಂಟಿಸುವುದು, ದತ್ತಾಂಶಗಳನ್ನು ಸಂಬಂಧಪಟ್ಟ ಅಪ್ಲಿಕೇಷನ್ಸ್‌ಗಳಲ್ಲಿ ಇಂಧೀಕರಿಸುವುದು ಮಾಡಬೇಕಾಗಿರುತ್ತದೆ. ಜನನಿಬಿಡ ಪ್ರದೇಶಗಳಲ್ಲಿ ಸ್ಥಳಾಭಾವದ ಕಾರಣದಿಂದಾಗಿ ಸಂಪರ್ಕದಲ್ಲಿರುವವರಿಗೆ ಪರಿಣಾಮಕಾರಿಯಾಗಿ ಮನೆಯಲ್ಲಿ ಪ್ರತ್ಯೇಕವಾಗಿರಿಸುವುದನ್ನು ಅನುಸರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಅಂತಹ ಪ್ರದೇಶಗಳ ಅಂತಹ ಸಂಪರ್ಕಿತರನ್ನು ಸಾಂಸ್ಥಿಕ ಪ್ರತ್ಯೇಕವಾಗಿರಿಸುವುಕ್ಕೆ ಸ್ಥಳಾಂತರಿಸಬೇಕಾಗುತ್ತದೆ.

ಸಂಪರ್ಕಿತರನ್ನು ಪರೀಕ್ಷೆಗೆ ಒಳಪಡಿಸುವ ಜವಾಬ್ದಾರಿ ಆರೋಗ್ಯ ತಂಡಗಳದ್ದಾಗಿರುತ್ತದೆ. ನಿಗದಿತ ಶಿಷ್ಟಾಚಾರದ ಪ್ರಕಾರ ಗಂಟಲ ದ್ರವ ಮಾದರಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಉರಿಶೀತ ಜ್ವರದಂತಹ ಸೋಂಕುಗಳು (ಐಎಲ್ ಐ ಗಳು) ಅಥವಾ ಗಂಭೀರವಾದ ತೀವ್ರ

ಉಸಿರಾಟ ಸೋಂಕು (ಎಸ್ ಎ ಆರ್ ಐ) ಪ್ರಕರಣಗಳನ್ನು ಅಥವಾ ಕೋವಿಡ್-19 ಅನ್ನು ಹೋಲುವ ಯಾವುದೇ ಗುಣಲಕ್ಷಣಗಳನ್ನು ಪತ್ತೆ ಹಚ್ಚುವ ಸಲುವಾಗಿ ಇಡೀ ಪ್ರದೇಶದ ಎಲ್ಲಾ ಜನರ ಹೆಲ್ತ್ ಪ್ರೊಫೈಲಿಂಗ್ (ಆರೋಗ್ಯ ವಿವರ ಪಟ್ಟಿ) ಹಾಗೂ ಅವರಿಗೆ ಚಿಕಿತ್ಸೆ ನೀಡುವ ಕಾರ್ಯವನ್ನು ಆದ್ಯತೆಯ ಕೆಲಸವಾಗಿ ಕೈಗೆತ್ತಿಕೊಳ್ಳಬೇಕಾಗುತ್ತದೆ. ಘಟನಾ ನಿಯಂತ್ರಕರ ಮಾರ್ಗದರ್ಶನದಲ್ಲಿ ಇಂತಹ ಪ್ರದೇಶದಲ್ಲಿ ಅತ್ಯಂತ ಕಟ್ಟುನಿಟ್ಟಾಗಿ ಸಾಮಾಜಿಕ ಅಂತರ ಕಾಪಾಡಲು ಜನರಿಗೆ ಸಲಹೆ ನೀಡಬೇಕಾಗುತ್ತದೆ. ಆರೋಗ್ಯ ಇಲಾಖೆಯು ಅಗತ್ಯ ಮಾಸ್ಕ್ ಮತ್ತು ಇತರೆ ವಸ್ತುಗಳನ್ನು ಗೃಹನಿರ್ಬಂಧದಲ್ಲಿರುವವರಿಗೆ ಭೌತಿಕ ಅಂತರ ಕಾಪಾಡಿಕೊಳ್ಳಲು ಒದಗಿಸುವುದು.

ನಿಯಂತ್ರಣವಲಯದಲ್ಲಿ ಒಂದು ವೇಳೆ ಆಸ್ಪತ್ರೆ ಇದ್ದರೆ ಕೂಡಲೇ ಅದನ್ನು ಕೋವಿಡ್ ಮೀಸಲು ಆಸ್ಪತ್ರೆಯನ್ನಾಗಿ ಪರಿವರ್ತವನೆಗೊಳಿಸಬೇಕು.

**4) ಗ್ರಾಮಸಭೆ ಜವಾಬ್ದಾರಿ**

ನಿಯಂತ್ರಣ ವಲಯಗಳಲ್ಲಿ ಸಮಗ್ರ ಸ್ವಚ್ಛತೆ ಕಾಪಾಡುವುದು ಗ್ರಾಮ ಪಂಚಾಯಿತಿ ಆಡಳಿತದ ಜವಾಬ್ದಾರಿಯಾಗಿರುತ್ತದೆ. ನಿಯಂತ್ರಣ ವಲಯಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ಮತ್ತು ಸೋಂಕು ನಿವಾರಕಗಳ ಸಿಂಪಡಣೆಯನ್ನು ಪ್ರತಿದಿನವೂ ಕೈಗೊಳ್ಳಬೇಕು. ಒಂದೊಮ್ಮೆ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾದರೆ ಶುದ್ಧವಾದ ಕುಡಿಯುವ ನೀರು ಪೂರೈಸುವುದು,ಅಗತ್ಯಬಿದ್ದರೆ ಮನೆಮನೆಗೂ ಕುಡಿಯುವ ನೀರು ಸೇರಿದಂತೆ ಅಗತ್ಯ ವಸ್ತು ಮತ್ತು ಸೇವೆಗಳನ್ನು ಪೂರೈಕೆ ಮಾಡಬೇಕು. ಈ ಮೇಲಿನ ಕಾರ್ಯಗಳಿಗೆ ನಿಯಂತ್ರಣವಲಯದ ಗ್ರಾಮಪಂಚಾಯತಿ ಸಿಬ್ಬಂದಿ ಗ್ರಾಮಪಂಚಾಯತಿ ದೃಢೀಕೃತ ಗುರುತುಪತ್ರವನ್ನು ಹೊಂದಿರಬೇಕು. ಆಡಳಿತ ಕೇಂದ್ರದ ಕಾರ್ಯ ಸುಗಮವಾಗಿ ಸಾಗಲು ಗ್ರಾಮ ಪಂಚಾಯಿತಿಗಳು ಎಲ್ಲ ಸೌಲಭ್ಯವನ್ನೂ ಒದಗಿಸಬೇಕು.

**5) ಅಗತ್ಯವಸ್ತುಗಳ ಪೂರೈಕೆ ನಿರ್ವಹಣೆ**

ನಿಯಂತ್ರಣವಲಯವನ್ನು ಸಂಪೂರ್ಣವಾಗಿ ಸೀಲ್ ಮಾಡುವುದರಿಂದ ದಿನಸಿ, ಮಾಂಸ, ಹಾಲು, ಔಷಧ ಸೇರಿದಂತೆ ಯಾವುದೇ ಮೂಲಭೂತ ಅಗತ್ಯಗಳಿಗೂ ಜನರು ಮನೆಯಿಂದ ಹೊರಬರುವಂತಿಲ್ಲ. ಈ ಹಿನ್ನೆಲೆಯಲ್ಲಿ ನಿಯಂತ್ರಣವಲಯದೊಳಗೆ ಅಗತ್ಯ ವಸ್ತು ಹಾಗೂ ಸೇವೆಗಳನ್ನು ಒದಗಿಸುವವರಿಗೆ ಪೊಲೀಸರು ಪ್ರವೇಶ ಹಾಗೂ ನಿರ್ಗಮನ ಪಾಸ್ ಗಳನ್ನು ಒದಗಿಸಬೇಕು. ನಿಯಂತ್ರಣ ವಲಯದಲ್ಲಿ ಮೂಲಭೂತ ಸೌಕರ್ಯ ಒದಗಿಸುವ ದಿನಸಿ, ಮಾಂಸ, ಔಷಧ ಅಂಗಡಿಗಳನ್ನು ಕೂಡ ಮುಚ್ಚಬೇಕು. ಪಡಿತರ ಚೀಟಿದಾರಗೆ ನ್ಯಾಯ ಬೆಲೆ ಅಂಗಡಿಗಳಿಂದ ಪಡಿತರವನ್ನು ಮನೆ ಬಾಗಿಲಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕು.

ಹೀಗಿದ್ದಾಗ್ಯೂ, ಕೃಷಿ ಚಟುವಟಿಕೆ ಮತ್ತು ಕಾರ್ಯಗಳಿಗೆ ಅನುವು ಮಾಡಿಕೊಡಬೇಕು. ನಿಯಂತ್ರಣವಲಯದ ಆರೋಗ್ಯವಂತ ವ್ಯಕ್ತಿಗಳು ಸಾಮಾಜಿಕ ಅಂತರ ಕಾಯ್ದುಕೊಂಡು, ಮುಖಕ್ಕೆ ರಕ್ಷಣಾ ಮಾಸ್ಕ ಧರಿಸಿ ಕೃಷಿ ಕಾರ್ಯದಲ್ಲಿ ತೊಡಗಬಹುದು.

**IV. ಬಫರ್ ವಲಯ ನಿರ್ವಹಣೆ:**

1) ನಿಯಂತ್ರಣ ವಲಯದ ಘಟನಾ ನಿಯಂತ್ರಕರಿಗೆ ಹೆಚ್ಚುವರಿಯಾಗಿ ಬಫರ್ ವಲಯದ ನಿರ್ವಹಣಾ ಜವಾಬ್ದಾರಿಯನ್ನು ವಹಿಸಬೇಕು. ಅವರು ಈಗಾಗಲೇ ಪ್ರಸ್ತಾಪಿಸಿರುವ ವ್ಯವಸ್ಥೆಯನ್ನು ಬಫರ್ ವಲಯದ ಮೇಲ್ವಿಚಾರಣೆಗೆ ಬಳಕೆ ಮಾಡುವುದು.
2) ಅರೆ ಲಾಕ್-ಡೌನ್, ಪೊಲೀಸರ ಜವಾಬ್ದಾರಿ: ನಿಯಂತ್ರಣ ವಲಯದ ಸುತ್ತ ಸಾಮಾಜಿಕ ಅಂತರ ನಿಯಂತ್ರಿಸುವ ಜತೆಗೆ ನಾಗರಿಕರ ನಿರ್ಬಂಧಿತ ಸಂಚಾರವನ್ನು ಪೊಲೀಸರು ಖಾತ್ರಿಪಡಿಸಬೇಕು. ಸಾರ್ವಜನಿಕ ಸಮಾರಂಭ, ಜನ ಸೇರುವುದಕ್ಕೆ ಅನುಮತಿ ನೀಡಬಾರದು.

**3) ಆರೋಗ್ಯ ಇಲಾಖೆ:**

ಎ) ಐಎಲ್ಐ (ILI) ಮತ್ತು ಎಸ್ಎಆರ್ ಐ (SARI) ಪ್ರಕರಣಗಳನ್ನು ಗುರುತಿಸಲು ಆರೋಗ್ಯ ಸಿಬ್ಬಂದಿ ಚುರುಕಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು. ಮತ್ತು ಅಂಥವರನ್ನು ಗುರುತಿಸಿ ಜ್ವರ ಕ್ಲಿನಿಕ್ ಹಾಗೂ ಪ್ರತ್ಯೇಕ ನಿಗಾ ಆಸ್ಪತ್ರೆಗಳಿಗೆ ಕಳುಹಿಸುವುದು.

ಬಿ) ಸರ್ವೇಕ್ಷಣಾ ತಂಡವೂ ಪ್ರತಿದಿನ 50 ಮನೆಗಳ ತಪಾಸಣೆ ಕೆಲಸ ಮಾಡಬೇಕು ಮತ್ತು ದಿನದಲ್ಲಿ ಎಲ್ಲ ಮನೆಗಳ ಆರೋಗ್ಯ ಸ್ಥಿತಿಗತಿಯ ಮಾಹಿತಿ ಪಡೆದುಕೊಳ್ಳಬೇಕು.

ಸಿ) ಸಾರ್ವಜನಿಕ ಸ್ಥಳದಲ್ಲಿ ಸಾಮಾಜಿಕ ಅಂತರ ಹಾಗೂ ಮಾಸ್ಕ್ ಬಳಕೆಯನ್ನು ಜಾರಿಗೊಳಿಸುವುದು.

ತಂಡಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳು ಸೂಕ್ತ ರಕ್ಷಣಾ ಸಲಕರಣೆಗಳಾದ ಗ್ಲೌಸ್, ಮಾಸ್ಕ್, ಸ್ಯಾನಿಟೈಸರ್ ಮತ್ತು ಪಿಪಿಇಗಳನ್ನು (ಎಚ್.ಎಫ್.ಡಬ್ಲ್ಯು ಮಾರ್ಗಸೂಚಿಗಳ ಪ್ರಕಾರ ಪಿಪಿಇಗಳು ಅಗತ್ಯವಿದ್ದರೆ) ಒದಗಿಸಬೇಕು.

**(ತ.ಮ. ವಿಜಯ್ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ
ಕರ್ನಾಟಕ ಸರ್ಕಾರ

**ಇವರಿಗೆ**

1. ಅಪರ ಮುಖ್ಯ ಕಾರ್ಯದರ್ಶಿಗಳು, ಆಕುಕ ಇಲಾಖೆ
2. ಆಯುಕ್ತರು, ಬಿಬಿಎಂಪಿ
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆ
4. ಅಭಿಯಾನ ನಿರ್ದೇಶಕರು, ಎನ್ಎಚ್ಎಂ
5. ಎಲ್ಲಾ ಜಿಲ್ಲಾಧಿಕಾರಿಗಳು
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆ
7. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ